

## ಸೋನಾಕ್ಷಿ ಹ್ಯಾಪ್ಪೀ..!

'ಹ್ಯಾಪ್ಪೀ ಫಿರ್ ಭಾಗ್ ಜಾಯೆಗಿ' ಚಿತ್ರದ ಪಾತ್ರದ ಬಗ್ಗೆ ಸೋನಾಕ್ಷಿ ಸಿನ್ಹಾ ಫುಲ್ ಖುಷ್ ಆಗಿದ್ದಾಳೆ. ಜಸ್ಸೀ ಗಿಲ್ ಜತೆಗಿನ ನಟನೆ ಪ್ರೇಕ್ಷಕರಿಗೆ ಸಖತ್ ಖುಷಿ ನೀಡಲಿದೆ ಎನ್ನುವುದು ಆಕೆಗೆ ಖಚಿತವಾಗಿದೆಯಂತೆ. ಈ ಹಿಂದೆ ತೆರೆಗೆ ಬಂದ 'ಹ್ಯಾಪ್ಪೀ ಭಾಗ್ ಜಾಯೆಗಿ' ಚಿತ್ರಕ್ಕೆ ಬಂದ ಉತ್ತೇಜನಕ್ಕಿಂತ ದೊಡ್ಡ ಮಟ್ಟದ ಪ್ರೋತ್ಸಾಹ ಈ ಎರಡನೇ ಭಾಗಕ್ಕೆ ಸಿಗಲಿದೆ ಎನ್ನುವುದು ಆಕೆಯ ವಿಶ್ವಾಸ.

ಹಲವಾರು ಸ್ಟೇಜ್ ಷೋಗಳಲ್ಲಿ ಸತತವಾಗಿ ಭಾಗವಹಿಸುತ್ತಿರುವ ಸೋನಾಕ್ಷಿಯ ನೃತ್ಯಗಳಿಗೆ ಸಾಕಷ್ಟು ಸಿಳ್ಳೆಗಳು ಬೀಳುತ್ತವೆ. ಸಿನಿಮಾಗಳಲ್ಲೂ ಈಕೆ ಇಂತಹ ಕುಣಿತಗಳಿಂದ ಜನಪ್ರಿಯತೆ ಗಳಿಸಿದ್ದಾಳೆ. 'ಸಾರೀ ಕೆ ಫಾಲ್ ಸಾ', 'ಗಂಧೀ ಬಾತ್' 'ಪಾರ್ಟಿ ಆಲ್ ನೈಟ್' ಮುಂತಾದ ಡ್ಯಾನ್ಸ್ ನಂಬರ್‌ಗಳು ಚಿತ್ರರಸಿಕರ ಮನಸ್ಸಿನಲ್ಲಿ ಸದಾ ಹಸಿರಾಗಿವೆ. 'ಪೂರ್ಣ ಡ್ಯಾನ್ಸ್ ಆಧಾರಿತ ಚಿತ್ರವೊಂದನ್ನು ಮಾಡಬೇಕೆಂದು ನನಗೆ ತುಂಬ ಮನಸ್ಸಿದೆ' ಎಂದು ಸಂದರ್ಶನವೊಂದರಲ್ಲೂ ಆಕೆ ಹೇಳಿದ್ದಾಳೆ. ಆಕೆಯ ಆಸೆಗೆ ತಕ್ಕಂತೆ 'ದಭಾಂಗ್ 3' ನಲ್ಲಿ ಈಗ ಡ್ಯಾನ್ಸಿಂಗ್ ಸ್ಟಾರ್ ಪ್ರಭುದೇವ ಕೂಡಾ ಸೇರ್ಪಡೆ ಆಗಿದ್ದಾನೆ. ಸಲ್ಮಾನ್ ಖಾನ್‌ನ 'ದಭಾಂಗ್' ಚಿತ್ರದ ಮೂಲಕವೇ 2010ರಲ್ಲಿ ಬಾಲಿವುಡ್‌ಗೆ ಕಾಲಿಟ್ಟಾಕೆ ಸೋನಾಕ್ಷಿ. 'ಈ 8 ವರ್ಷಗಳಲ್ಲಿ ಸಲ್ಮಾನ್ ಜತೆಗಿನ ಹೊಂದಾಣಿಕೆ ಏನಾದರೂ ಬದಲಾವಣೆ ಆಗಿದೆಯೆ?' ಎಂದು ಪ್ರಶ್ನಿಸಿದರೆ, 'ಏನೂ ಆಗಿಲ್ಲ. ಇದೊಂದು ತರಹ ತವರಿಗೆ ಮರಳಿದಂತೆ. ದಭಾಂಗ್ ನನ್ನ ಹೋಮ್‌ಗ್ರೌಂಡ್' ಎಂದಿದ್ದಾಳೆ. 'ಹ್ಯಾಪ್ಪೀ...', 'ಕಳಂಕ್', 'ದಭಾಂಗ್ 3'– ಹೀಗೆ ಹಬ್ಬದ ಹೊತ್ತಿಗೆ ಸೋನಾಕ್ಷಿಯ ಸಾಲು ಸಾಲು ಚಿತ್ರಗಳು ತೆರೆಗಪ್ಪಳಿಸುತ್ತಿವೆ. ನಿಜಕ್ಕೂ ಸೋನಾಕ್ಷಿ ಹ್ಯಾಪ್ಪೀ..!

## ರಿಸ್ಕ್ ಇದ್ದೇ ಇದೆ!

'ಸ್ತ್ರೀ'ಯಂತಹ ಹಾರರ್ ಕಾಮಿಡಿ ಸಿನಿಮಾಗಳನ್ನು ಮಾಡುವುದು ರಿಸ್ಕೀ ಅಲ್ಲವೆ.? ಎನ್ನುವುದೊಂದು ಪ್ರಶ್ನೆ. ಈ ಪ್ರಶ್ನೆ ಎದುರಾದದ್ದು ಚಿತ್ರದ ನಾಯಕಿ ಶ್ರದ್ಧಾ ಕಪೂರ್‌ಗೆ. 'ಹೊಸತನ್ನು ಮಾಡದಿದ್ದರೆ ಪ್ರೇಕ್ಷಕರನ್ನು ಮೆಚ್ಚಿಸಲು ಸಾಧ್ಯವಿಲ್ಲ. ಒಂದೇ ತರಹದ ಇಮೇಜ್‌ಗೆ ಕಟ್ಟುಬೀಳುವುದು ಯಾವುದೇ ನಟಿಗೆ ಒಳ್ಳೆಯದಲ್ಲ. ಹಾಗೆ ನೋಡಿದರೆ ಪ್ರತಿಯೊಂದು ಚಿತ್ರವೂ ರಿಸ್ಕೀ' ಎಂದು ಉತ್ತರಿಸಿದ್ದಾಳೆ ಶ್ರದ್ಧಾ. ಬಾಲಿವುಡ್‌ನಲ್ಲಿ ಸಾಕಷ್ಟು ಸೀನಿಯರ್ ನಟಿಯರಿಗೆ ಇಲ್ಲದ ಚಿಂತನಾಶಕ್ತಿ ಶ್ರದ್ಧಾಳಿಗೆ ಇದೆ ಎಂದೇ ಬಾಲಿವುಡ್ ಪಂಡಿತರು ಹೇಳುತ್ತಿದ್ದಾರೆ.

'ಸ್ತ್ರೀ' ಬಿಡುಗಡೆಯ ಹೊಸ್ತಿಲಲ್ಲಿದೆ. ಈ ಮಧ್ಯೆ ಬಾಹುಬಲಿ ಪ್ರಭಾಸ್ ಜೊತೆಗಿನ 'ಸಾಹೋ' ಚಿತ್ರದ ಕೊನೆಯ ಹಂತದ ಚಿತ್ರೀಕರಣಕ್ಕೆ ತಂಡ ರೊಮೇನಿಯಾಕ್ಕೆ ಹೋಗಲಿದೆಯಂತೆ. ಹೈದರಾಬಾದ್‌ನಲ್ಲಿ ಮೂರನೆ ಹಂತದ ಚಿತ್ರೀಕರಣದಲ್ಲಿ ಬಿಡುವಿಲ್ಲದೆ ದುಡಿಯುತ್ತಿರುವ ಶ್ರದ್ಧಾ, ನಡುನಡುವೆ ಸ್ತ್ರೀ ಮತ್ತು 'ಬತ್ತೀ ಗುಲ್ ಮೀಟರ್ ಚಾಲೂ' ಚಿತ್ರದ ಪ್ರಚಾರಕ್ಕಾಗಿಯೂ ಸಾಕಷ್ಟು ಓಡಾಡಿದ್ದಾಳೆ.

'ಸಾಹೋ' ಚಿತ್ರ ಬಿಡುಗಡೆಯಾದ ಬಳಿಕ ಶ್ರದ್ಧಾ ಬಾಲಿವುಡ್‌ನಲ್ಲಿ 'ನಂಬರ್ ಒನ್' ಹೀರೋಯಿನ್ ಸ್ಥಾನಕ್ಕೆ ಪ್ರಬಲ ಪ್ರತಿಸ್ಪರ್ಧಿ ಆಗಲಿದ್ದಾಳೆ ಎನ್ನುವ ಅಂದಾಜಿದೆ. ಕರೀನಾ, ಕತ್ರೀನಾ ಮುಂತಾದವರು ಈಗಾಗಲೆ ಸೀನಿಯರ್ ಸಿಟಿಜನ್ಸ್ ಆಗುವತ್ತ ದಾಪುಗಾಲಿಟ್ಟಿದ್ದು ಆ ಸ್ಥಾನವನ್ನು ಶ್ರದ್ಧಾ ತುಂಬಬಹುದು.



■ ಬಿಂದು